15-12-20

# ಮೇಲ್ಮನೆ ಮೇಲಾಟ ಸಭಾಪತಿ vs ಆಡಳಿತ ಪಕ್ಷ

15-12-20

## ವಿಪ್ ಜಾರಿಮಾಡಿದ ಕಾಂಗ್ರೆಸ್ | ಜೆಡಿಎಸ್ ನಿಲುವು ನಿಗೂಢ | ಅವಿಶ್ವಾಸ ನಿರ್ಣಯಕ್ಕೆ ಬಿಜೆಪಿ ಪಟ್ಟು

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ವಿಧಾನಮಂಡಲ ಇತಿಹಾಸದಲ್ಲೇ ಅಪರೂಪದ ಘಟನೆ ಮಂಗಳವಾರ ನಡೆಯುತ್ತಿದ್ದು, ಅನಿರ್ದಿಷ್ಟಾವಧಿಗೆ ಮುಂದೂಲ್ಪಟ್ಟ ಪರಿಷತ್ ಕಲಾಪವನ್ನು ಐದು ದಿನಗಳ ಬಳಿಕ ಮುಂದವರಿಸಲಾಗುತ್ತಿದ್ದು, ಆಡಳಿತ ಮತ್ತು ಪ್ರತಿಪಕ್ಷ ಪ್ರತಿಷ್ಠೆಯಾಗಿ ತೆಗೆದುಕೊಂಡಿವೆ.

ಡಿ.7ರಂದು ಆರಂಭವಾದ ಕಲಾಪ 4 ದಿನಕ್ಕೆ ಮುಕ್ತಾಯಗೊಳಿಸಲು ಆಡಳಿತ ಮತ್ತು ಪ್ರತಿಪಕ್ಷ ಒಪ್ಪಿದವು. ವಿಧಾನಸಭೆ . ಕಲಾಪ ಸಲಹಾ ಸಮಿತಿ ನಿರ್ಧಾರದಂತೆ ಗುರುವಾರ ವಿಧಾನಸಭೆ ಕಲಾಪ ಮುಕ್ತಾಯವಾಯಿತು. ಪರಿಷತ್ ಕಲಾಪ ಮುಂದುವರಿಸಲು ಪರಿಷತ್ ಕಲಾಪ ಸಲಹಾ ಸಮಿತಿ ಸಭೆಯಲ್ಲಿ ನಿರ್ಧಾರವಾಗಿತ್ತು. ಈ ನಡುವೆ ಗುರುವಾರ ಸಂಜೆ ಕಲಾಪವನ್ನು ಅನಿರ್ದಿಷ್ಟಾವಧಿಗೆ ಮುಂದೂಡಿದ್ದರು. ತಕ್ಷಣವೇ ರಾಜಭವನದ ಬಾಗಿಲು ಬಡಿದ ಬಿಜೆಪಿ ಸದಸ್ಯರು, ಮಧ್ಯ ಪ್ರವೇಶಕ್ಕೆ ಮನವಿ ಮಾಡಿದರು. ಅನಿವಾರ್ಯವಾಗಿ ಡಿ.15ರಂದು ಕಲಾಪಕ್ಕೆ ಸಭಾಪತಿ ಒಪ್ಪಬೇಕಾಯಿತು. ಇನ್ನೊಂದೆಡೆ ಕಾಂಗ್ರೆಸ್ ಸಭಾಪತಿ ಸ್ಥಾನ ಉಳಿಸಿಕೊಳ್ಳುವ ಸಲುವಾಗಿ ತನ್ನ ಸದಸ್ಯರಿಗೆ ವಿಪ್ ಜಾರಿ ಮಾಡಿದೆ. ನಿರ್ಣಾಯಕ ಪಾತ್ರ ವಹಿಸುವ ಜೆಡಿಎಸ್ ನಿಲುವು ಗುಟ್ಟಾಗಿದೆ.

| ಬಲಾಬಲ | |
|---|---|
| ಬಿಜೆಪಿ | 31 |
| ಪಕ್ಷೇತರ | 01 |
| ಕಾಂಗ್ರೆಸ್ | 29 |
| ಜೆಡಿಎಸ್ | 14 |

ಸಭಾಪತಿ ನಿಯಮಾವಳಿ ಪ್ರಕಾರ ನಡೆದುಕೊಳ್ಳುತ್ತಾರೆಂಬ ವಿಶ್ವಾಸದಲ್ಲಿ ಕಲಾಪದಲ್ಲಿ ಭಾಗವಹಿಸುತ್ತೇವೆ. ಅವಿಶ್ವಾಸ ಮಂಡನೆ ವಿಚಾರದಲ್ಲಿ ಮತಕ್ಕೆ ಹಾಕಬೇಕಾಗುತ್ತದೆ.

ಕೋಟ ಶ್ರೀನಿವಾಸ ಪೂಜಾರಿ ಸಭಾ ನಾಯಕ



- ಅವಿಶ್ವಾಸ ನಿರ್ಣಯ ತಿರಸ್ಕರಿಸಿದ ನಿರ್ಧಾರವನ್ನು ಸಭಾಪತಿ ಮತ್ತೊಮ್ಮೆ ಪ್ರಕಟಿಸಬಹುದು.
- ಸಭಾಪತಿ ತೀರ್ಮಾನಕ್ಕೆ ವಿರುದ್ಧವಾಗಿ ಆಡಳಿತ ಪಕ್ಷದ ಸದಸ್ಯರು ಧರಣಿ ನಡೆಸಬಹುದು.
- ಗೋಹತ್ಯೆ ನಿಷೇಧ ವಿಧೇಯಕ/ ಕಾರ್ಯಸೂಚಿಯ ಇನ್ನಿತರ ವಿಷಯ ಕೈಗೆತ್ತಿಕೊಳ್ಳುವಂತೆ ಸೂಚಿಸಬಹುದು.
- ಗೋಹತ್ಯೆ ವಿಧೇಯಕ ಮಂಡಿಸಿದರೆ ಚರ್ಚೆಗೆ ಅವಕಾಶ ನೀಡಿ, ಪ್ರತಿಪಕ್ಷದ ಸಲಹೆ ಪರಿಗಣಿಸಿ ಸೆಲೆಕ್ಟ್ ಕಮಿಟಿಗೆ ಕೊಡುವ ಸಾಧ್ಯತೆ.

### ಕಾರ್ಯಸೂಚಿಯಲ್ಲಿ ಏನಿದೆ?

- ಗೋಹತ್ಯೆ ವಿಧೇಯಕ ಮಂಡನೆ
- ಅತಿವೃಷ್ಟಿ ಬಗ್ಗೆ ಚರ್ಚೆ
- ಪ್ರಶ್ನೋತ್ತರ
- ಹೊಸ ಶಿಕ್ಷಣ ನೀತಿ ಬಗ್ಗೆ ಅರ್ಧಗಂಟೆ ಚರ್ಚೆ

### ಮೈತ್ರಿ ಲೆಕ್ಕಾಚಾರವೇನು?

75 ಸದಸ್ಯ ಬಲದ ಪರಿಷತ್‌ನಲ್ಲಿ ಆಡಳಿತಾರೂಢ ಬಿಜೆಪಿಗೆ ಪೂರ್ಣ ಬಹುಮತ ಇಲ್ಲ. 5 ಸದಸ್ಯರ ಕೊರತೆ ಬೀಳಲಿದೆ. ಅನಿವಾರ್ಯವಾಗಿ ಜೆಡಿಎಸ್ ಬೆಂಬಲ ಕೋರಲೇ ಬೇಕಾಗುತ್ತದೆ. ಸಭಾಪತಿ ಪದಚ್ಯುತಿ ಅಥವಾ ಗೋ ಹತ್ಯೆ ನಿಷೇಧ ವಿಧೇಯಕಕ್ಕೆ ಒಪ್ಪಿಗೆ ಪಡೆಯಲು ಜೆಡಿಎಸ್ ನಿರ್ಣಾಯಕ. ಭೂ ಸುಧಾರಣೆ ತಿದ್ದುಪಡಿ ಕಾಯ್ದೆ ವಿಚಾರದಲ್ಲಿ ಸರ್ಕಾರದ ಪರ ನಿಂತಂತೆ, ಗೋಹತ್ಯೆ ನಿಷೇಧ ವಿಚಾರದಲ್ಲಿ ಬಿಜೆಪಿ ಪರ ನಿಂತಂತೆ ಕಾಣಿಸುತ್ತಿಲ್ಲ. ಒಂದೊಮ್ಮೆ ಮತಕ್ಕೆ ಹಾಕುವ ಪ್ರಕ್ರಿಯೆ ನಡೆದರೆ ಜೆಡಿಎಸ್ ಕಲಾಪದಿಂದ ಹೊರಗಿದ್ದರೆ ಸರ್ಕಾರ ಮುಜುಗರದಿಂದ ತಪ್ಪಿಸಿಕೊಂಡಂತೆ. ವಿರುದ್ಧ ನಿಂತರೆ ಸರ್ಕಾರಕ್ಕೆ ಹಿನ್ನಡೆ. ಅನಿವಾರ್ಯವಾಗಿ ಕಾಯ್ದೆಗೆ ಸುಗ್ರೀವಾಜ್ಞೆ ತಂದುಕೊಳ್ಳಬೇಕಾಗುತ್ತದೆ. ಕಾಂಗ್ರೆಸ್ ಒತ್ತಾಯದಂತೆ ಸೆಲೆಕ್ಟ್ ಕಮಿಟಿಗೆ ವರ್ಗವಾದರೆ ಸರ್ಕಾರದ ಪ್ರಯತ್ನಕ್ಕೆ ದೊಡ್ಡ ಹಿನ್ನಡೆಯಾದಂತಾಗಲಿದೆ.

### ಪಕ್ಷಗಳ ಕಾರ್ಯತಂತ್ರವೇನು?

ಮಂಗಳವಾರ ಶಾಸಕಾಂಗ ಪಕ್ಷದ ಸಭೆ ಕರೆದಿದ್ದು, ಅಲ್ಲಿ ಕಾರ್ಯತಂತ್ರ ನಿರ್ಧಾರವಾಗಲಿದೆ. ಸಭಾಪತಿ ಸ್ಥಾನ ಉಳಿಸಿಕೊಳ್ಳುವುದು, ಗೋಹತ್ಯೆ ನಿಷೇಧ ವಿಧೇಯಕ ಸೆಲೆಕ್ಟ್ ಕಮಿಟಿಗೆ ಹೋಗುವಂತೆ ನೋಡಿಕೊಳ್ಳಲಿದೆ.

ಸಭಾಪತಿ ವಿರುದ್ಧ ಅವಿಶ್ವಾಸ ನಿರ್ಣಯ ತಿರಸ್ಕೃತವಾದರೂ, ಪದಚ್ಯುತಿಗೆ ಸಾಧ್ಯವಾಗುವ ಎಲ್ಲ ಪ್ರಯತ್ನ. ರಾಜ್ಯಪಾಲರಿಗೆ ಮತ್ತೆ ದೂರು ಕೊಡುವುದು, ಜೆಡಿಎಸ್ ಬೆಂಬಲ ಪಡೆದು ಮುನ್ನಡೆಯುವುದು.

ಸರ್ಕಾರದ ಅನಿವಾರ್ಯತೆ ಬಳಸಿಕೊಂಡು ಹೆಜ್ಜೆ ಇಡುವುದು. ವರಿಷ್ಠರ ಕೊನೇ ಗಳಿಗೆಯ ಸೂಚನೆಗೆ ಕಾಯುವುದು, ಸರ್ಕಾರದ ಪರ ನಿಲ್ಲಬೇಕಾದ ಅನಿವಾರ್ಯತೆ ಬಂದರೆ ಕಲಾಪದಿಂದ ಹೊರಗುಳಿಯುವುದು.

## ಅವಿಶ್ವಾಸ ಚರ್ಚೆಗಿಲ್ಲ ಅವಕಾಶ

**ಬೆಂಗಳೂರು:** ಸಭಾಪತಿ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸುವ ಬಿಜೆಪಿ ಸದಸ್ಯರ ಸೂಚನೆಗಳು ಚಾಲ್ತಿಯಲ್ಲಿರದ ಕಾರಣ ಸದನದಲ್ಲಿ ಚರ್ಚೆಗೆ ತೆಗೆದುಕೊಳ್ಳಲು ಅವಕಾಶವಿಲ್ಲ ಎಂದು ಪ್ರತಿಪಕ್ಷ ನಾಯಕ ಎಸ್.ಆರ್.ಪಾಟೀಲ್ ಹೇಳಿದರು. ಸಭಾಪತಿ ಕರ್ತವ್ಯ ನಿರ್ವಹಣೆಯಲ್ಲಿ ಪಕ್ಷಪಾತ ಅನುಸರಿಸುವ ಮೂಲಕ ಸಂವಿಧಾನದ ಆಶಯಗಳಿಗೆ ಧಕ್ಕೆ ತಂದಿದ್ದಾರೆ ಎಂಬ ಸೂಚನಾ ಪತ್ರವನ್ನು ಪರಿಶೀಲಿಸಿ, ಕಾನೂನು ತಜ್ಞರೊಂದಿಗೆ ಸಮಾಲೋಚಿಸಿ ತಿರಸ್ಕರಿಸಿದ್ದಾರೆ. ಈ ಬಗ್ಗೆ ಸಂಬಂಧಿಸಿದವರಿಗೆ ಹಿಂಬರಹ ಕೂಡ ಕೊಡಲಾಗಿದೆ. ಹಾಗಾಗಿ ಈಗ ಕೊಟ್ಟಿರುವ ಸೂಚನೆಗಳ ಮೇಲೆ ಅವಿಶ್ವಾಸ ನಿರ್ಣಯದ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದರು. ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಮೇಲ್ಮನೆಯಲ್ಲಿ 37 ಸದಸ್ಯರ ಬಲವಿದ್ದಾಗಲೂ ಜೆಡಿಎಸ್‌ಗೆ ಉಪಸಭಾಪತಿ ಸ್ಥಾನ ಬಿಟ್ಟುಕೊಟ್ಟಿದ್ದೆವು. ಈಗಲೂ ಜೆಡಿಎಸ್ ನಮ್ಮನ್ನು ಬೆಂಬಲಿಸುವ ವಿಶ್ವಾಸವಿದೆ. ಆದರೆ, ಆ ವಿಷಯವನ್ನು ಪಕ್ಷದ ವರಿಷ್ಠರು ಮಾತನಾಡುತ್ತಾರೆ ಎಂದು ಹೇಳಿದರು.



## ಉಪಸಭಾಪತಿ ಅಧ್ಯಕ್ಷತೆ ಸಭೆಗೆ ಬಿಜೆಪಿ ಆಗ್ರಹ

ಅವಿಶ್ವಾಸ ನಿರ್ಣಯ ಕ್ರಮ ಬದ್ಧವಾಗಿಲ್ಲ ಎಂದು ಹಿಂಬರಹ ನೀಡಿರುವ ಸಭಾಪತಿ ವಿರುದ್ಧ ಸಮರ ಸಾರಿರುವ ಬಿಜೆಪಿ, ಅವಿಶ್ವಾಸ ನಿರ್ಣಯ ಕ್ರಮ ಬದ್ಧವಾಗಿದೆ ಎಂದು ಮಾರುತ್ತರ ನೀಡಿದೆ. ಕಲಾಪ ಸಂದರ್ಭ ಸಭಾಪತಿ ಅವರೇ ಪೀಠದಲ್ಲಿ ಕುಳಿತು ಕೊಳ್ಳುವುದು ನಿಯಮಾವಳಿಗೆ ವಿರುದ್ಧವಾಗಿರುತ್ತದೆ. ಆದ್ದರಿಂದ ತಾವು ಅಧ್ಯಕ್ಷತೆ ವಹಿಸಿ, ಅವಿಶ್ವಾಸ ನಿರ್ಣಯ ಚರ್ಚೆಗೆ ಅವಕಾಶ ಮಾಡಿಕೊಡಬೇಕು ಎಂದು ಬಿಜೆಪಿ ಸದಸ್ಯರು ಉಪ ಸಭಾಪತಿಗೆ ಪತ್ರ ಬರೆದಿದ್ದಾರೆ.

4